3. ದರಖಾಸ್ತು ಬಂದು ಮಾಡಲ್ಪಟ್ಟು "ಶಿಕಾರಿಪುರದಲ್ಲಿ ಹೊಸತಾಲ್ಲೂಕು ಕಚ್ಚೇರಿಯನ್ನು ಕಟ್ಟುವ ಬಗ್ಗೆ ದರಖಾಸ್ತು" ಯೆಂದು ವಿಲಾಸ ಬರಯಲ್ಪಟ್ಟು, ಶಿವಮೊಗ್ಗೆಯಲ್ಲಿ ಶಿವಮೊಗ್ಗಾ ಡಿವೀಜ೯ ಎಗ್ಜಿಕ್ಯೂಟಿವ್ ಇಂಜನಿಯರಿಗೆ ಕಳುಹಿಸಲ್ಪಡತಕ್ಕದ್ದು.

ಸ೯ 1884ನೇ ಜೂ೯ 30ನೇ ಮುಕ್ತಾಯಿಗೆ ತರುವಾಯ ಯಾವ ದರಖಾಸ್ತೂ ತೆಗದುಕೊಳ್ಳಲ್ಪಡಲಾರದು.

4. ಇನ್ನೂ ಹೆಚ್ಚಿಗೇ ಸಂಗತಿಯೂ, ಸಬ್ ಹೆಡ್‌ಗಳ ಷೆಡ್ಯೂಲ್ ಪಟ್ಟಿಯೂ, ಇದರಡಿ ರುಜು ಮಾಡಿರುವವರಿಗೆ ಪ್ರತಖಾಸ್ತು ಮಾಡಿ ಪಡಕೊಳ್ಳಬಹುದು.

5. ಇದರಡಿ ರುಜು ಮಾಡಿರುವವರು ಕಮ್ಮಿ ದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ ಹಾಗೆ ಮಾಡಲಿಕ್ಕೆ ಯಾವ ಸಬಬನ್ನೂ ನಮೂದಿಸದೆ ಮಂಜೂರ್ಮಾಡತಕ್ಕ ಅಧಿಕಾರವನ್ನು ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

ಪಿ. ಎಸ್. ನಾಗವ೯ಕರ್, ಎಲ್. ಸಿ. ಇ.
ಎಗ್ಜಿಕ್ಯೂಟಿವ್ ಇಂಜನಿಯರ್.

ಶಿವಮೊಗ್ಗಾ ಸಬ್ ಡಿವೀಜ೯ ಮುನಸಿಫ್ ಮಾಜಿಸ್ಟ್ರೇಟ್ ಕೋರ್ಟಿನಿಂದ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ, ಈ ಕೋರ್ಟು 1883ನೇ ಇಸವಿ ಅರಿಜನಲ್ ಕೇಸ್ ನಂಬರ್ 70ನೇ ಮೊಕದ್ದಮಾದಲ್ಲಿ ಹಾಜರಾದ ಪೊಲೀಸಿನವರು ಗುಮಾನಿಮೇಲೆ ಹಿಡದು ಹಾಜರ್ ಪಡಿಸಿದ ನಂಬರ್ 4735ನೇ ಸ೯ 1878ನೇ ಇಸವಿ ಬಂಬಾಯಿ ನೋಟ್ 10 ರೂಪಾಯಿನ ಬಾಬತು ಎಷಟ್ಟುಗದ ಅರ್ಧ ತುಕಡೆ ಬೇದಾವೆ ಸೊತ್ತಾಗಿ ಸೇರಿಸಿಕೊಂಡಿದ್ದೆ, ಯಿದಕ್ಕೆ ಯಾರಾದರು ವಾರಸ್ದಾರ್ರು ಯಿದ್ದರೆ ಈ ತಾರೀಖು ಲಾಗಾಯತು 6 ತಿಂಗಳ ವಳಗಾಗಿ ಕೋರ್ಟು ರೂಬರೂ ಹಾಜರಾಗಿ ಬಾಧ್ಯತೆ ವ್ಯವಹರಿಸಿಕೊಳ್ಳಬೇಕು ಆ ಮೇರೆ ಯಾರ್ಹೂ ಬಾರದಿದ್ದರೆ ನಾಯಿದಾನಂತರ ಸರಕಾರಕ್ಕೆ ಕೇರಿಸಿಕೊಳ್ಳಲಾಧೀತು.

ತಾರೀಖು 7ನೇ ಮಾಪ೯ ಜೂ೯ 1884ನೇ ಇಸವಿ.

ವಿ. ಡಿ. ಪೊನ್ನರಂಗಂ ಮೊದಲಿಯಾರ್,
ಸಕೆಂಡ್ ಕ್ಲಾಸ್ ಮಾಜಿಸ್ಟ್ರೇಟ್.

ಕಡೂರು ಡಿಸ್ಟ್ರಿಕ್ಟು.

ತಾರೀಖು 13ನೇ ಜೂ೯ 1884

ಮಂಜಿರಾಬಾದ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ವೆಂಕಟರಮಣಯ್ಯನವರಿಗೆ, 1872ನೇ ಇಸವಿ Xನೇ ನಂಬರ್ ಆಕ್ಟ್‌ಂಬ ಕ್ರಿಮಿನಲ್ ಪ್ರೊಸೀಜ್ಯೂರ್ ಕೋಡಿನ 23ನೇ ಬಿ. ಸೆಕ್ಷನ್ ಅನುಸರಿಸಿ ಇದರಡಿ ಕಂಡ ಅಧಿಕಾರಗಳು ಕೊಡಲ್ಪಟ್ಟಿರುತ್ತೆ,—

1. ಲಾಷ್ ವಿಚಾರಣೆ ಬಗ್ಗೆ ಅಧಿಕಾರ, (ಸೆಕ್ಷನ್ 135)
2. ಅವರಿಗೆ ದರ್ಯಾಫ್ತ್ ಮಾಡುವದಕ್ಕೆ ಅಧಿಕಾರ ವಿರುವ ಮೊಕದ್ದಮೆಗಳಲ್ಲಿ ತಕರೇರುಗಳ ಫಿರ್ಯಾದುಗಳನ್ನ ದಾಖಲ್ಮಾಡಿಕೊಳ್ಳುವದಕ್ಕೆ ಅಧಿಕಾರ (ಸೆಕ್ಷನ್ 141)
3. ನಿರೋಧ ವಗ್ಯೆರೆಗಳನ್ನು ಅಡ್ಡೀಪಡಿಸುವಂತೆ ಹುಕ್ಕುಂ ಮಾಡುವದಕ್ಕೆ ಅಧಿಕಾರ (ಸೆಕ್ಷನ್ 518)
4. ಹೇಸಿಗೆಗಳು ಬಾರ್ ಬಾರ್ ನಡಿಯುವದನ್ನು ಅಡ್ಡೀ ಪಡಿಸುವಂತೆ ಹುಕ್ಕುಂ ಕೊಡುವದಕ್ಕೆ ಅಧಿಕಾರ (ಸೆಕ್ಷನ್ 519.)

ಜಿ. ಎಚ್. ಮೈಕಲ್ಜಾರ್ಜ್,
ಡಿಸ್ಟ್ರಿಕ್ಟು ಮಾಜಿಸ್ಟ್ರೇಟ್.

ಸ೯ 1884ನೇ ಇಸವಿ ಮೇ ತಿಂಗಳ ಕಾಲಸ್ಥಿತಿ ರಿಪೋರ್ಟು.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಮಳೆ.—ಈ ತಿಂಗಳೊಳಗೆ ಇದರಡಿ ಕಂಡಂತೆ ಮಳೆ ಬಿದ್ದಿರುತ್ತೆ:—

ತಾಲ್ಲೂಕು.	ಆಂ.	ಸೆಂಟ್ಸ್.	ತಾಲ್ಲೂಕು	ಆಂ.	ಸೆಂಟ್ಸ್
ಶಿವಮೊಗ್ಗಾ	0	24	ಸೊರಬ ..	0	0
ಚನ್ನಗಿರಿ .	0	59	ಸಾಗರ ..	0	0
ಹೊನ್ನಾಳಿ ..	1	10	ನಗರ ..	1	60
ಶಿಕಾರಿಪುರ ..	1	45	ತೀರ್ಥಹಳ್ಳಿ ..	1	6
			ದಾವಣಗೆರೆ ..	1	45

ಬೀಜ ಪೇರಾವಾದ್ದು.—ಈ ತಿಂಗಳೊಳಗೆ ನೆಲ್ಲು, ಉದ್ದು, ಗನ್ನಾ, ಯೆಳ್ಳು ವಗೈರೆ ಬಿತ್ತಲ್ಪಟ್ಟವು.

ಬೆಳೆಗಳ ಸ್ಥಿತಿ.—ಗನ್ನಾ ಮತ್ತು ಇತರ ಬೆಳೆಗಳು ವಣಗುತ್ತಿವೆ. ಉಳುವ ಮತ್ತು ಬಿತ್ತುವ ಕೆಲಸಗಳು ಮಳೆ ಇಲ್ಲದೆ ಹರಕ ತ್ತಾಗಿರುತ್ತೆ.

ಫಸಲ್ ಕಟುವಾದ್ದು.—ನಗರ ತಾಲ್ಲೂಕಿನಲ್ಲಿ ಕಾರ್‌ನೆಲ್ಲು ಕಟುವಾಯಿತು.

ಜನಾರೋಗ್ಯ.—ಜನಾರೋಗ್ಯವು ಚನ್ನಾಗಿಲ್ಲ. ಡಿಸ್ಟ್ರಿಕ್ಟ್‌ಮುಳೆ ಜ್ವರ ಉಪದ್ರವವು ಇನ್ನು ವ್ಯಾಪಿಸಿದೆ. ದಾವಣಗೆರೆಯಲ್ಲಿ ಮೂ ರು ಮಂದಿಗೆ ಐೃ ಜೂಲಾಬ್ ತಗಲಿದ್ದಾಗಿ ರಿಪೋರ್ಟಾಗಿರುತ್ತೆ.

ಧಾತಕೆಗಳು.—ದಾರಣೆಗಳು ಸ್ವಲ್ಪ ಚಡಾವಾಗಿರುತ್ತೆ.

ಎನ್. ವೆಂಕಟವರದಯ್ಯಂಗಾರ್,
ಡೆಪ್ಯೂಟಿ ಕಮ್ಮಿಷನರ್.

ಪ್ರಕಟಣೆ.

ಮೈದಾ ತಾಲ್ಲೂಕುಗಳಲ್ಲಿ, ಮೇಲ್ಪಟ್ಟ ಅಥವಾ ತಾಲ್ಲೂಕು ಪಾಠಶಾಲೆಗಳ ಬಗ್ಗೆ ಕೊಡಗು ವಿದ್ಯಾಭ್ಯಾಸದ ಇಲಾಖೇಗಾಗಿ ಇಬ್ಬ ರು ಹೆಡ್ ಮಾಸ್ಟರುಗಳು ಬೇಕಾಗಿರುವದರಿಂದ ಉಮೇದ್‌ವಾರರು ಕನ್ನಡ ಪದ್ಯವನ್ನೂ, ವ್ಯಾಕರಣವನ್ನೂ ಚನ್ನಾಗಿ ತಿಳಿದಿರತಕ್ಕದ್ದು, ಅವ ರುಗಳು ಇಂಗ್ಲೀಷನ್ನು ಶುದ್ಧಾಂಗ ತಿಳಿದಿರಬೇಕಾದ ಆವಶ್ಯಕವಿಲ್ಲವು, ಪರಂತು ಗಣಿತಶಾಸ್ತ್ರವೂ, ಭೂಗೋಳ ತಂತ್ರವೂ, ಇಂಗ್ಲಿಷ್‌ದ್ವಾರಾ ಕಲಿಸಲ್ಪಟ್ಟಿರುವ ಉಮೇದ್‌ವಾರು ಚುನಾಯಿಸಲ್ಪಡುವರು.

ಹಾಲೀ ತಲಬ 20 ರೂಪಾಯಿಗಳು ಕೊಡಲ್ಪಡುವದು, ವಯಸ್ಸು, ಜಾತಿ, ಸ್ವದೇಶ, ಲಾಯಖೀಗಳು, ಟೀಚರಾಗಿದ್ದ ಪೂರ್ವದ ಅ ನುಭವ, ಮತ್ತು ಹಾಲೀ ಯಿರುವ ಕೆಲಸ ಈ ಮುಂತಾದ ತಪಸೀಲ್‌ಗಳ ಸಮೇತ ಇದರಡಿ ರುಜು ಮಾಡಿರುವವರ ಆಫೀಸಿಗೆ ದರಖಾಸ್ತು ಮಾಡತಕ್ಕದ್ದು.

ಇ. ಮಾರ್ಸ್‌ಡೆ,
ಕೊಡಗು ಸ್ಕೂಲ್‌ಗಳ ಇನ್‌ಸ್ಪೆಕ್ಟರ್.

ಗವರ್ನಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥ ವಾಗಿ ಗವರ್ನಮೆಂಟ್ ಆಫೀಸರ್‌ಗಳು ಕೊಂಡು ಕೊಳ್ಳಬಹುದು, ಬಂದು ಸಲಕ್ಕೆ ಇಪ್ಪತ್ತು ಪೌಂಡುಗಳು ತೆಗದುಕೊಳ್ಳುವ ಯಾವ ಮನುಷ್ಯ ನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್‌ಸೂಪರ್‌ಟೆಂಡೆಂಟರ ದೆಕೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡು ಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಬಂದಕ್ಕೆ ರೂ. 4—8—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 8—8—0; ಬಂದು ಪೌಂಡ್ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ್ ಸೂಪರ್‌ಟೆಂಡೆಂಟರು ಇದರಡೀ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಬದಗಿಸ ಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿ ಬಂದಕ್ಕೆ ರೂ. 5—8—0, ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 10—8—0, ಬಂದು ಪೌಂಡ್‌ವುಳ್ಳ ಡಬ್ಬಿಗೆ 20 ರೂಪಾಯಿ. ಈ ಔಷಧವು, ಕಲ್‌ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯರ್ ನೇಟಿವ್ ಮರ್ಚಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ವ 8 ಔನ್ಸ್ ತಗರದ ಡಬ್ಬಿಗೆ ಎಂಟು ಆಣೆ ಟಪ್ಪಾಲ್ ಹಾಸಲೂ, ಬಂದು ಪೌಂಡ್ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.